# ತೇಲಿಸೋ ಇಲ್ಲ ಮುಳುಗಿಸೋ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 274.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 242.
3. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 73.
4. **Note:** Lyrics mentioned here are as per Ref. 1. The wordings in Ref. 2 are same as in Ref. 1. The wordings in Ref. 3 is same as in Ref. 1 except few minor differences which are not considered here.
5. **Note:** Singer has followed these wordings.

ರಾಗ: ಪೂರ್ವಿ ಕಲ್ಯಾಣಿ ತಾಳ: ಅಟ್ಟ

ತೇಲಿಸೋ ಇಲ್ಲ ಮುಳುಗಿಸೋ ನಿನ್ನ
ಕಾಲಿಗೆ ಬಿದ್ದೆನೊ ಪರಮ ಕೃಪಾಳೋ ॥ ಪ ॥

ಸತಿ ಸುತ ಧನದಾಸೆ ಎಂಬಂತೆ ಮೋಹದಿ
ಹಿತದಿಂದ ಅತಿನೊಂದು ಬೆಂಡಾದೆನೊ
ಗತಿ ಕೊಡುವರ ಕಾಣೆ ಮತಿಯ ಪಾಲಿಸೊ ಲಕ್ಷ್ಮೀ
ಪತಿ ನಿನ್ನ ಚರಣದ ಸ್ಮರಣೆಯಿತ್ತೆನಗೆ ॥ ೧ ॥

ಜರೆ ರೋಗ ದಾರಿದ್ರ್ಯ ಕಶ್ಮಲವೆಂತೆಂಬ
ಶರಧಿಯೊಳಗೆ ಬಿದ್ದು ಮುಳುಗಿದೆನೊ
ಸ್ಥಿರವಲ್ಲ ದೇಹವು ನೆರೆ ನಂಬಿದೆ ನಿನ್ನ
ಕರುಣಾಭಯವಿತ್ತು ಪಾಲಿಸೊ ಹರಿಯೆ ॥ ೨ ॥

ದೋಷವುಳ್ಳವ ನಾನು ಭಾಷೆಯುಳ್ಳವ ನೀನು
ಮೋಸ ಹೋದೆನೋ ಭಕ್ತಿ ರಸವ ಬಿಟ್ಟು

ಶೇಷಶಯನ ಶ್ರೀ ಪುರಂದರ ವಿಠಲನ
ದಾಸರ ಸಂಗವಿತ್ತು ಪಾಲಿಸೊ ಹರಿಯೆ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಸಂಪೂರ್ಣ ಸಮರ್ಪಣ ಭಾವದ ಪ್ರಾರ್ಥನಾಗೀತೆ ಇದು. ಸಾಂಸಾರಿಕ (ಸತಿ ಸುತ ಮೋಹದಿ) ಆರ್ಥಿಕ (ಧನದಾಸೆ ಎಂತೆಂಬ ಮೋಹದಿ) ಶಾರೀರಿಕ (ಜರೆ ರೋಗ ದಾರಿದ್ರ್ಯ ಎಂತೆಂಬ) ಹಿತಾಸಕ್ತಿಗಳಿಗೆ ವಶವಾಗಿ ಮೋಸಹೋಗಿರುವ ಜೀವವೊಂದು ಕಡೆಗೆ ನಿಜವನ್ನು ಅರಿತುಕೊಂಡು ತನ್ನ ವ್ಯರ್ಥ ತೊಳಲಾಟವನ್ನು ನಿಲ್ಲಿಸಿ ದೈವದ ಆಶ್ರಯ ಬೇಡಿ ಬಂದಿದೆ.

**ಸತಿ–ಸುತ–ಧನದಾಸೆ** – ಭ್ರಮೆಯ ಏಷಣಾತ್ರಯಗಳು (ದಾರೈಷಣ, ಪುತ್ರೈಷಣ, ವಿತ್ತೈಷಣ).

**ಜರೆ** – ಮುಪ್ಪು.

**ಶರಧಿ** – ಸಮುದ್ರ.

**ಕಶ್ಮಲ** = ಹೊಲಸು, ಕೊಳೆ, ಮೈಲಿಗೆ, ಭಯ, ಮೂರ್ಛೆ

**ದೋಷವುಳ್ಳವ ನಾನು ಭಾಷೆಯುಳ್ಳವ ನೀನು** – ಎಷ್ಟೇ ತಪ್ಪು ಮಾಡಿದ್ದರೂ ಕಾಪಾಡುವುದಾಗಿ ದೈವ ಜೀವನಿಗೆ ಭಾಷೆ ಕೊಟ್ಟಿರುವುದರಿಂದ ಈ ಹೇಳಿಕೆ (ಭಗವದ್ಗೀತೆಯ 'ಅಪಿಚೇತ್ಸುದುರಾಚಾರಃ' ಎನ್ನುವ ಶ್ಲೋಕ).

**Classification:** Keerthane
**Ankita:** sri purandara vittala
**Location:** NA
**Category:** Artha Bhava, Jeevana Sambodhane
**Sub-Category:** pati, patni, maga, Ase, Lakshmi, Vishnu, smarane, roga, Samudra, deha, Krishna, mosa, vairagya,
**Pravachana:** NA
**Explanation:** NA